೧೧–೩೦ ಎ.ಎಂ.

ಮುಖ್ಯವಾಗಿ ಅಲ್ಲಿರುವ ಸಮಸ್ಯೆಗಳನ್ನೆಲ್ಲಾ ಬಿಡಿಸತಕ್ಕಂಥ ಕೆಲಸವನ್ನು ನಾವು ಮಾಡಿದ್ದೇವೆ. ಮಾನ್ಯ ಸದಸ್ಯರು ಅಲ್ಲಿ ಹಲವಾರು ಅವ್ಯವಹಾರಗಳು ಏನು ನಡೆದಿವೆ, ಅವುಗಳ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರಾ ಎಂದು ಕೇಳಿದ್ದಾರೆ. ಮಾನ್ಯ ಸದಸ್ಯರು ಹೇಳಿದ ಹಾಗೆ ಅವ್ಯವಹಾರಗಳು ಸಾಕಷ್ಟು ಆಗಿದೆ. ಪೀಸ್ ವರ್ಕ್ ಕೊಡತಕ್ಕ ಪ್ರಯತ್ನದಲ್ಲಿಯೂ ಹಲವಾರು ರೀತಿಯ ಅವ್ಯವಹಾರಗಳು ಆಗಿರುವುದು ನಿಜ. ಹಾಗೆಯೇ ಕ್ಲಾಸಿಫಿಕೇಷನ್ ಕೊಡುವುದರಲ್ಲಿಯೂ ಕೂಡ ಅವ್ಯವಹಾರ ಆಗಿದೆ. ಇವುಗಳ ಬಗ್ಗೆ ತನಿಖೆ ಮಾಡಿಸುವುದರ ಬಗ್ಗೆ ಕೆಲವೊಂದನ್ನು ಲೋಕಾಯುಕ್ತಕ್ಕೆ ಹಾಕಿದ್ದೇವೆ. ಮತ್ತೆ ಕೆಲವೊಂದನ್ನು ನಮ್ಮ ಇಲಾಖೆಯಲ್ಲಿಯೇ ಪ್ರೈಮಾಫೇಸಿ ಇದಯೋ ಇಲ್ಲವೋ ಎಂದು ತನಿಖೆ ಮಾಡಿಸುತ್ತಿದ್ದೇನೆ. ಇದರ ಬಗ್ಗೆ ಅಂಕಿಅಂಶಗಳನ್ನು ನಂತರ ತಮಗೆ ತಲುಪಿಸಲಿಕ್ಕೆ ಸಿದ್ಧನಿದ್ದೇನೆ. ಮಾನ್ಯ ಸದಸ್ಯರು ಕೇಳಿದಂತೆ ಎಷ್ಟು ಪ್ರಕರಣಗಳಲ್ಲಿ ತನಿಖೆ ಮಾಡಿದ್ದೇವೆಂದು ಇವೊತ್ತು ಹೇಳುವುದು ಕಷ್ಟವಾಗುತ್ತದೆ.

ಡಾ ಎಲ್. ಮಲಕರೆಡ್ಡಿ.— ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ೧೯೮೫ರಲ್ಲಿ ಆಡಳಿತಾತ್ಮಕ ಮಂಜೂರಾತಿ ನೀಡಿದ ಮೊದಲನೆಯ ಘಟ್ಟದ ಯೋಜನಾ ವರದಿಯ ಪ್ರಕಾರ ಯೋಜನೆಯನ್ನು ೧೯೯೫–೯೬ರ ವೇಳೆಗೆ ಪೂರೈಸಬೇಕಾಗಿದೆ ಎಂದು ತಮ್ಮ ಉತ್ತರದಲ್ಲಿ ಹೇಳಿದ್ದಾರೆ. ಇದನ್ನು ತಾವು ಪೂರ್ತಿ ಮಾಡಲಿಕ್ಕೆ ಎಷ್ಟು ಹಣವನ್ನು ಒದಗಿಸಿದ್ದೀರಿ. ಮತ್ತು ಎಸ್ಟಿಮೇಟ್ ಎಷ್ಟಕ್ಕೆ ಆಗಿದೆ ಎನ್ನುವುದನ್ನು ಮಾನ್ಯ ಮಂತ್ರಿಗಳು ತಿಳಿಸಬೇಕು.

ಶ್ರೀ ಜಿ. ಪುಟ್ಟಸ್ವಾಮಿಗೌಡ.— ಇದು ಜಾಗತಿಕ ಬ್ಯಾಂಕ್ ನೆರವು ಕೊಡತಕ್ಕಂಥ ಯೋಜನೆ. ಈ ಯೋಜನೆಗೆ ಹಣದ ಪ್ರಶ್ನೆ ಬರುವುದಿಲ್ಲ. ಈಗ ನೂರಕ್ಕೆ ಎಂಭತ್ತರಷ್ಟು ಹಣವನ್ನು ಜಾಗತಿಕ ಬ್ಯಾಂಕ್‌ನವರು ಕೊಡುವುದರಿಂದ, ಹಣದ ಕೊರತೆ ಈ ಒಂದು ಯೋಜನೆಗೆ ಬರುವುದಿಲ್ಲ. ನಮ್ಮ ಭಾಗದ ಷೇರು ೧೫ರಿಂದ ೨೦ ಪರ್‌ಸೆಂಟ್. ನಮಗೆ ಆ ಹಣವನ್ನು ಒದಗಿಸುವುದು ಕಷ್ಟವಾಗುವುದಿಲ್ಲ. ನಮ್ಮ ನೀರಿನ ಹಕ್ಕನ್ನು ಉಪಯೋಗಿಸಿಕೊಳ್ಳಲಿಕೆ ಹಿಂದೆ ಬೀಳುವುದಿಲ್ಲವೆಂಬ ಮಾತನ್ನು ಖಂಡಿತವಾಗಿ ಹೇಳುತ್ತೇನೆ.

ಪ್ರಶ್ನೆ ೧೬೩ (೩೪೩) ಸದಸ್ಯರು ಗೈರುಹಾಜರು.

ಹಳೆಯ ಸೇತುವೆಗಳಲ್ಲಿನ ನಿರುಪಯುಕ್ತ ವಸ್ತುಗಳ ಹರಾಜು

೪೭೪ ಶ್ರೀ ಎ. ರುಕ್ಮಯ್ಯ ಪೂಜಾರಿ (ವಿಟ್ಲ).— ಮಾನ್ಯ ನೀರಾವರಿ ಹಾಗೂ ಲೋಕೋಪಯೋಗಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿಯ ರಸ್ತೆಗಳನ್ನು ಅಗಲ ಮತ್ತು ನೆಟ್ಟಗೆ (ಸ್ಟೈಟ್) ಮಾಡುವಾಗ ಹಲವಾರು ಸೇತುವೆಗಳು ನಿರುಪಯುಕ್ತವಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಅಂತಹ ಸೇತುವೆಗಳಲ್ಲಿ ಹಲವಾರು ಉಪಯುಕ್ತ ಸಾಮಾಗ್ರಿಗಳಿರುವುದರಿಂದ ಅವುಗಳನ್ನು ಏಲಂ ಮಾಡುವುದರಿಂದ ಸರ್ಕಾರಕ್ಕೆ ಆದಾಯ ಬರುವುದಿಲ್ಲವೇ?

ಇ) ಹಾಗಿದ್ದಲ್ಲಿ ಏಲಂ ಮಾಡಲು ಸರ್ಕಾರವು ಸೂಕ್ತ ಕ್ರಮ ತೆಗೆದುಕೊಳ್ಳುವುದೆ ?

ಶ್ರೀ ಜಿ. ಪುಟ್ಟಸ್ವಾಮಿ ಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಯವರು).—

ಅ) ಬಂದಿದೆ.

ಆ) ಉಪಯುಕ್ತ ಸಾಮಾಗ್ರಿಗಳು ಇರುವಂತಹ ನಿರುಪಯುಕ್ತ ಸೇತುವೆಗಳನ್ನು ಹರಾಜು ಮಾಡಿ ಬಂದ ಹಣವನ್ನು ಸರ್ಕಾರಕ್ಕೆ ಜಮಾ ಮಾಡಲಾಗುತ್ತಿದೆ.

ಇ) ಈಗಾಗಲೇ ಕ್ರಮ ತೆಗೆದುಕೊಳ್ಳಲಾಗಿದೆ.

ಶ್ರೀ ಎ ರುಕ್ಮಯ್ಯ ಪೂಜಾರಿ.— ಮಾನ್ಯ ಅಧ್ಯಕ್ಷರೆ ನಮ್ಮ ರಾಜ್ಯದಲ್ಲಿ ಈ ರಸ್ತೆಗಳನ್ನು ಅಗಲ ಮಾಡುವ ಮತ್ತು ನೆಟ್ಟಗೆ ಮಾಡುವ ಸಂದರ್ಭದಲ್ಲಿ ಹಲವಾರು ಸೇತುವೆಗಳು ನಿರುಪಯುಕ್ತವಾಗಿರುವುದನ್ನು ನಾವು ಕಾಣುತ್ತಿದ್ದೇವೆ. ಅದರಲ್ಲಿರುತಕ್ಕ ಸಾಮಾನುಗಳು ಏನಿದೆ, ಕಲ್ಲುಗಳು ಮತ್ತು ಐರನ್ ತುಂಬಾ ಬೆಲೆ ಬಾಳತಕ್ಕದ್ದು ಇರುತ್ತದೆ. ಅದನ್ನು ಹರಾಜು ಮಾಡಿ ಅದರಿಂದ ಬಂದ ಹಣವನ್ನು ಸರ್ಕಾರಕ್ಕೆ ಜಮಾ ಮಾಡಿದರೆ ಸರ್ಕಾರಕ್ಕೆ ತುಂಬಾ ಆದಾಯ ಬರುತ್ತದೆ. ಮಾನ್ಯ

ಮಂತ್ರಿಗಳು ನನ್ನ (ಅ) ಪ್ರಶ್ನೆಗೆ ಉತ್ತರವಾಗಿ ಉಪಯುಕ್ತ ಸಾಮಗ್ರಿಗಳು ಇರುವಂತಹ ನಿರುಪಯುಕ್ತ ಸೇತುವೆಗಳನ್ನು ಪುರಾಜು ಮಾಡಿ ಬಂದ ಹಣವನ್ನು ಸರ್ಕಾರಕ್ಕೆ ಜಮಾ ಮಾಡಲಾಗುತ್ತಿದೆ ಎಂದು ಮಾನ್ಯ ಸಚಿವರು ಹೇಳಿದ್ದಾರೆ. ನಮ್ಮ ತಾಲ್ಲೂಕಿನ ಮಟ್ಟಿಗೆ ಹೇಳುವುದಾದರೆ, ಇಂತಾದ್ದು ಎಲ್ಲಿಯೂ ಕೂಡ ಬಂದಿಲ್ಲ. ನಮ್ಮಲ್ಲಿ ಯಾವುದೇ ಒಂದು ಸೇತುವೆಯನ್ನು ಹರಾಜು ಮಾಡಿದ್ದು ಕಂಡಿಲ್ಲ. ನಮ್ಮ ಜಿಲ್ಲೆಯ ಪಂಟ್ಟಿಗಾದರೂ ಎಲ್ಲಿ ಹರಾಜು ಮಾಡಿದ್ದಾರೆ, ಯಾವಾಗ ಮಾಡಿದ್ದಾರೆ ಎನ್ನುವುದನ್ನು ಮಾನ್ಯ ಮಂತ್ರಿಗಳು ತಿಳಿಸಬೇಕು.

ಶ್ರೀ ಜಿ. ಪುಟ್ಟಸ್ವಾಮಿ ಗೌಡ. – ಈ ನಿರುಪಯುಕ್ತ ಸೇತುವೆಯಲ್ಲಿರತಕ್ಕ ಕಬ್ಬಿಣದ ಸಾಮಗ್ರಿಗಳನ್ನು ಹರಾಜು ಮಾಡಿ ಆದರಿಂದ ಬಂದಂಥ ಹಣವನ್ನು ಸರ್ಕಾರಕ್ಕೆ ಜಮಾ ಮಾಡತಕ್ಕ ನಿಯಮ ಇವೊತ್ತು ನಮ್ಮ ಸರ್ಕಾರದಲ್ಲಿ ಇದೆ. ಆದರಂತೆ ಕೆಲವೊಂದು ಕಡೆ ಮಾಡಿದ್ದಾರೆ. ಮತ್ತೊಂದು ಕಡೆ ಆ ಸಾಮಾನುಗಳನ್ನು ತೆಗೆಯತಕ್ಕದ್ದಕ್ಕೆ ಆಗತಕ್ಕ ಖರ್ಚು ಬರತಕ್ಕ ಆದಾಯಕ್ಕಿಂತಲೂ ಜಾಸ್ತಿ ಯಾಗುತ್ತದೆ ಎನ್ನುವ ಒಂದು ವರದಿ ಸಹ ಇದೆ. ನಮ್ಮ ಪಿ.ಡಬ್ಲ್ಯು.ಡಿ. ನಿಯಮದ ಪ್ರಕಾರ ಅದನ್ನು ಡೆಮಾಲಿಷ್ ಮಾಡಬೇಕಾದರೆ ಎಷ್ಟು ಹಣ ಬೇಕಾಗುತ್ತದೆ, ಎಷ್ಟು ಹಣ ಬರದೇ ಇರುವಂಥ ಕಾರಣಕ್ಕಾಗಿ ಬಿಟ್ಟಿರುತ್ತಾರೆ. ಅದು ತಾನಾಗಿ ಕುಸಿದು ಬಿದ್ದಾಗ ಆ ಸಾಮಾನುಗಳನ್ನು ಹರಾಜು ಮಾಡತಕ್ಕ ಪ್ರವೃತ್ತಿ ಸಹ ಇದೆ ಮಾನ್ಯ ಸದಸ್ಯರು ಕೊಡತಕ್ಕ ಸಲಹೆ ಪ್ರಕಾರ ಎಲ್ಲಿ ಜಾಸ್ತಿ ರವಿನ್ಯೂ ಹರಾಜು ಮೂಲಕ ಬರುತ್ತದೆ ಎಂದು ಹೇಳಿದ್ದಾರೆ. ಆದು ಕಡಿಮೆ ವೆಚ್ಚದಲ್ಲಿ ಮಾಡಲಿಕ್ಕೆ ಆಗುತ್ತದೆಯೇ ಅದನ್ನು ನೋಡಿ ಅದನ್ನು ತೆಗೆಯತಕ್ಕ ಪ್ರಯತ್ನ ಮಾಡಬೇಕಾಗುತ್ತದೆ. ತಮ್ಮದು ಉತ್ತಮವಾದ ಸಲಹೆ ಎಂದು ನಾನು ಈಗ ಹೇಳಬಯಸುತ್ತೇನೆ. ಆದರಂತೆ ಕೆಲಸ ಕೂಡ ನಾವು ಮಾಡುತ್ತೇವೆ.

ಕಲಘಟಗಿಯಲ್ಲಿ ಮುನ್ಸಿಫ್ ಕೋರ್ಟ್ ಪ್ರಾರಂಭಿಸುವ ಕುರಿತು

೪೭೧. ಶ್ರೀ ಪಿ. ಸಿ. ಸಿದ್ದನಗೌಡ (ಕಲಘಟಗಿ).—ಮಾನ್ಯ ಯೋಜನಾ, ಕಾನೂನು ಹಾಗೂ ಸಂಸದೀಯ ವ್ಯವಹಾರಗಳು ಮತ್ತು ಪ್ರವಾಸೋದ್ಯಮ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕಲಘಟಗಿ ತಾಲ್ಲೂಕಿಗೆ ಮುನ್ಸಿಫ್ ಕೋರ್ಟ್ ಪ್ರಾರಂಭಿಸುವ ವಿಚಾರ ಸರ್ಕಾರದವರ ಪರಿಶೀಲನೆಯಲ್ಲಿದೆಯೇ ?

ಆ) ಹಾಗಿದ್ದಲ್ಲಿ ಎಂದಿನಿಂದ ಮುನ್ಸಿಫ್ ಕೋರ್ಟನ್ನು ಪ್ರಾರಂಭಿಸಲಾಗುವುದು ?

ಶ್ರೀ ಎಂ. ವೀರಪ್ಪ ಮೊಯ್ಲಿ (ಕಾನೂನು ಸಂಸದೀಯ ವ್ಯವಹಾರಗಳು ಮತ್ತು ಪ್ರವಾಸೋದ್ಯಮ ಮಂತ್ರಿಗಳು).—

ಅ) ಕಲಘಟಗಿ ತಾಲ್ಲೂಕಿನಲ್ಲಿ ಮುನ್ಸಿಫ್ ಕೋರ್ಟ್ ಪ್ರಾರಂಭಿಸುವ ವಿಚಾರವು ಇನ್ನೂ ಉಚ್ಚ ನ್ಯಾಯಾಲಯದ ಪರಿಶೀಲನೆಯಲ್ಲಿದೆ.

ಆ) ಉಚ್ಚ ನ್ಯಾಯಾಲಯದಿಂದ ಪ್ರಸ್ತಾವನೆಯು ಸರ್ಕಾರಕ್ಕೆ ಬಂದಾಗ ಇರುವ ಸಂಪನ್ಮೂಲಗಳನ್ನು ಅನುಸರಿಸಿ ಪ್ರಾರಂಭಿಸಲಾಗುವುದು.

ಶ್ರೀ ಪಿ. ಸಿ. ಸಿದ್ದನಗೌಡ.—ಕಲಘಟಗಿ ತಾಲ್ಲೂಕ್ ಮುನ್ಸಿಫ್ ಕೋರ್ಟ್ ಪ್ರಾರಂಭ ಮಾಡಲಿಕೆಂದು ನಾನು ಕೇಳುತ್ತಿರುವುದು ಇದು ಐದನೇ ವರ್ಷ ಎಂದು ಕಾಣುತ್ತದೆ. ಈಗ ತಾವು ಅದು ಫೀಸ್ಟಿಬಿಲಿಟಿ ವಿಚಾರ ಕೂಡ ಪರಿಶೀಲನೆಯಲ್ಲಿದೆ ಅಂದರೆ ಅದರಿಂದ ನಮಗೆ ಬಹಳ ದುಃಖವಾಗುತ್ತದೆ. ಆದ್ದರಿಂದ, ಮಾನ್ಯ ಸಚಿವರು ಏನಾದರೂ ಮಾಡಿ ಅದರ ಬಗ್ಗೆ ಡಿಸಿಷನ್ ತೆಗೆದುಕೊಳ್ಳಬೇಕು. ಹೈಕೋರ್ಟ್ ಜಡ್ಜ್ ಕಲಘಟಗಿಗೆ ವಿಸಿಟ್ ಮಾಡಿ ಬಿಲ್ಡಿಂಗ್ಸ್ ನೋಡಿದರು. ಈಗಾಗಲೇ ಹ್ಯಾಂಡ್ ಓವರ್ ಮಾಡಿದ್ದೇವೆ. ಈಗ ಗೌರ್ನಮೆಂಟ್‌ನಿಂದ ಡಿಲೇ ಆಗುತ್ತಿದೆ. ಆದ್ದರಿಂದ, ಅದನ್ನು ಬೇಗ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತಿದ್ದೇನೆ. ಒಂದು ವೇಳೆ ಈ ವಿಚಾರದಲ್ಲಿ ಆ ಜಿಲ್ಲೆಯ ವಕೀಲರುಗಳು ಯಾರಾದರು ಅಪೋಸ್ ಮಾಡಿದ್ದಾರಾ ? ಮಾಡಿದ್ದರೆ ಅದನ್ನು ತಿಳಿಸಿ. ನೀವು ಕೊಡುವುದು ಬಿಡುವುದು ನಮಗೇ ಬಿಟ್ಟಿದ್ದು. ಆದರೆ ಯಾವುದೊಂದೂ ಡಿಸೈಡ್ ಮಾಡಿ ಕೊಡುತ್ತೇವೆಂದು ಹೇಳುವುದಾದರೆ ಯಾವಾಗ ಕೊಡುತ್ತೇವೆಂದು ಹೇಳಿ ಇಲ್ಲದಿದ್ದರೆ ಇಲ್ಲವೆಂದು ಹೇಳಿ.

ಶ್ರೀ ಎಂ. ವೀರಪ್ಪ ಮೊಯಿಲಿ.—ಮಾನ್ಯ ಅಧ್ಯಕ್ಷರೇ, ಧಾರವಾಡ ಹುಬ್ಬಳ್ಳಿಯಲ್ಲಿರತಕ್ಕಂತಹ ಬಾರ್ ಅಸೋಸಿಯೇಷನ್ ಆಗಲೀ ಅಲ್ಲಿನ ವಕೀಲರುಗಳಾಗಲೀ, ಅಲ್ಲಿ ಮಾಡಬಾರದೆಂಬ ಮನವಿಯನ್ನು